# ಸಮನ್ವಯನದ ನಿಜವಾದ ಅರ್ಥ | 'ಸದ್ಭಾವನಾ ವಿದ್ಯಾಲಯ'ದೆಡೆಗೆ

ಸಂಧ್ಯಾದೇವಿ

ಸಮನ್ವಯ ಶಾಲೆಯ (inclusive school) ಬಗ್ಗೆ ಮಾತಾಡುವಾಗ, ವಿಶೇಷ ಅಗತ್ಯಗಳಿರುವ ಮಕ್ಕಳು, 'ನಿರೀಕ್ಷಿತ ಬೆಳವಣಿಗೆ' ಹೊಂದುತ್ತಿರುವ ಮಕ್ಕಳ ಜೊತೆಗೆ ಓದುವ ಶಾಲೆ ಎಂಬರ್ಥದಲ್ಲಿ ಮಾತನಾಡಲಾಗುತ್ತದೆ. ಆದರೆ ಸಮನ್ವಯ ಶಾಲೆಯ ಅರ್ಥ ಇಷ್ಟಕ್ಕೆ ಸೀಮಿತವಾಗಬೇಕೇ? ಯಾವುದೇ ವಿಶೇಷ ಅಗತ್ಯಗಳಿರುವ ಮಕ್ಕಳಿಲ್ಲದೆಯೂ ಸಮನ್ವಯತೆ ಸಾಧಿಸಬೇಕಾದ ಶಾಲೆಗಳ ಕಥೆ ಏನು? ನಮ್ಮನ್ನೇ ನಾವು ಕೇಳಿಕೊಳ್ಳೋಣ: ಶಾಲಾ ಅಸೆಂಬ್ಲಿಯಲ್ಲಿ ಶಾಲೆಯ ಪ್ರತಿಯೊಂದು ಮಗುವಿಗೂ ಭಾಗವಹಿಸುವ ಅವಕಾಶ ಸಿಗುತ್ತದೆಯೇ? ತರಗತಿಯಲ್ಲಿ ಪ್ರತಿ ಮಗುವಿಗೂ ಎದ್ದು ಮಾತನಾಡಲು ಅವಕಾಶವಿದೆಯೇ? ಶಾಲಾ ತರಗತಿಯನ್ನು ಅಲಂಕರಿಸುವ ಕೆಲಸವನ್ನು ಹುಡುಗರು ಮತ್ತು ಹುಡುಗಿಯರು ಸಮವಾಗಿ ಹಂಚಿಕೊಳ್ಳುತ್ತಾರೆಯೇ? ನಮ್ಮಲ್ಲಿ ಬಹಳಷ್ಟು ಜನ ಈ ಪ್ರಶ್ನೆಗಳಿಗೆ 'ಇಲ್ಲ' ಎಂದೇ ಉತ್ತರಿಸುತ್ತೇವೆ. ನಾವೆಲ್ಲ ಒಟ್ಟಾಗಿ ಕೆಲಸ ಮಾಡಿದರೆ, ಇಂಥ ಹಲವು ಸಮಸ್ಯೆಗಳನ್ನು ಎದುರಿಸಬಹುದು ಹಾಗೂ ನಮ್ಮ ಶಾಲೆಗಳನ್ನು ನಿಜವಾದ ಅರ್ಥದಲ್ಲಿ ಸಮನ್ವಯಗೊಳಿಸಬಹುದು.

ನಮ್ಮ ತರಗತಿಗಳಲ್ಲಿ, ನಾವು ಪದೇಪದೇ ಗಮನಿಸಬಹುದಾದ ಸಂಗತಿ ಏನೆಂದರೆ, ಕೆಲವು ಕೆಲಸಗಳನ್ನು ಒಂದು ಗುಂಪಿನ ಮಕ್ಕಳಿಗೆ ಮಾತ್ರ ವಹಿಸಿಕೊಟ್ಟು ಉಳಿದವರನ್ನು ಹೊರಗಿಡ-ಲಾಗುತ್ತದೆ. ನಮಗೆ ಇದರ ಅರಿವಿದೆಯೋ ಇಲ್ಲವೋ, ಆದರೆ ಹೀಗೆ ಕೆಲವರನ್ನು ಹೊರಗಿಡುವುದು ಎಂದರೆ ಅವರನ್ನು ಅವಕಾಶದಿಂದ ವಂಚಿತಗೊಳಿಸುವುದು ಎಂದೇ ಅರ್ಥ. ನಾವು ಶಿಕ್ಷಕರೇ 'ಜಾಣ' ಮಕ್ಕಳು ಮತ್ತು 'ದಡ್ಡ' ಮಕ್ಕಳು ಎಂಬ ಎರಡು ಗುಂಪುಗಳನ್ನು ಸೃಷ್ಟಿಸುತ್ತೇವೆ. ಕೇವಲ ಬುದ್ಧಿವಂತ ಮಕ್ಕಳು ಮಾತ್ರ ಎಲ್ಲ ಚಟುವಟಿಕೆಗಳನ್ನು ಚೆನ್ನಾಗಿ ನಿಭಾಯಿಸಬಲ್ಲರು ಹಾಗೂ ಶೈಕ್ಷಣಿಕವಾಗಿ ಅಷ್ಟೇನೂ ಪ್ರಗತಿ ಹೊಂದದ ಮಕ್ಕಳು ಇತರ ಚಟುವಟಿಕೆಗಳನ್ನೂ ನಿಭಾಯಿಸಲಾರರು ಎಂದು ನಾವು ಭಾವಿಸುತ್ತೇವೆ. ಈ ಮಕ್ಕಳ ಬೆಳವಣಿಗೆಯೂ ಸೇರಿದಂತೆ ಇಡೀ ಶಾಲೆಯ ಬೆಳವಣಿಗೆಯೇ ಇಂಥ ಮನಸ್ಥಿತಿಯ ಕಾರಣದಿಂದ ಕುಂಠಿತಗೊಳ್ಳುತ್ತದೆ.

ಹೀಗೆ ಪ್ರತಿಯೊಂದು ಮಗುವಿನ ಅನನ್ಯತೆಯನ್ನು, ಅಸಾಧಾರಣ ಕಾರ್ಯಗಳನ್ನು ನಿರ್ವಹಿಸುವಲ್ಲಿನ ಅವರ ಸಾಮರ್ಥ್ಯವನ್ನು ಗುರುತಿಸುವಲ್ಲಿ ನಾವು ಏಕೆ ವಿಫಲರಾಗುತ್ತೇವೆ? ಈ ಪ್ರಶ್ನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಗಿದ್ದಾದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ (ನವಘರ್ ಬ್ಲಾಕ್, ಜಂಜಗಿರ್ ಚಂಪಾ ಜಿಲ್ಲೆ, ಛತ್ತೀಸ್ಗಢ) ಒಂದು ಸಮನ್ವಯ ಪರಿಸರವನ್ನು ಸೃಷ್ಟಿಸಲು ಹೊರಟೆವು. ಇದಕ್ಕೆ ಕೇವಲ ಶಾಲೆಯಷ್ಟೇ ಅಲ್ಲ, ಈ ಉಪಕ್ರಮಕ್ಕೆ ಇಡೀ ಸಮುದಾಯವೇ ನಮಗೆ ಬೆಂಬಲ ನೀಡಲು ಮುಂದಾಯಿತು. ನಾವು ಕೈಗೊಂಡ ಕಾರ್ಯ ಚಟುವಟಿಕೆಗಳು ಈ ಕೆಳಕಂಡಂತಿವೆ.

## ಸಂವಿಧಾನ ದಿನಾಚರಣೆ

ನಮ್ಮ ಶಾಲೆಯನ್ನು ಸಮನ್ವಯ ಶಾಲೆಯನ್ನಾಗಿ ಮಾಡಲು, ಮಕ್ಕಳು ತಮ್ಮ ಬದುಕಿನಲ್ಲಿ ಹೊಸಹೊಸ ವಿಚಾರಗಳನ್ನು ಅಳವಡಿಸಿಕೊಳ್ಳಲು ಅನುವಾಗುವಂತೆ 'ಮುಕ್ತ ವೈಚಾರಿಕತೆ'ಯ (open in Thoughts) ಒಂದು ಅಡಿಪಾಯ ಹಾಕುವುದು ಅವಶ್ಯಕವಾಗಿತ್ತು.

- ಸಂವಿಧಾನ ದಿನದಂದು, ಮಕ್ಕಳು ನೋಡಿ ಓದಲು ಅಪೇಕ್ಷಿಸುವಂತಹ ರೀತಿಯಲ್ಲಿ ಸಾಂವಿಧಾನಿಕ ಮೌಲ್ಯಗಳನ್ನು ಬರೆದು ಗೋಡೆಗಳ ಮೇಲೆ ಅಂಟಿಸಿದೆವು. ಈ ಮೌಲ್ಯಗಳ ಬಗ್ಗೆ ನಾವು ಚರ್ಚೆಯನ್ನು ಮಾಡಿ ಮಕ್ಕಳು ಅವರ ಅನಿಸಿಕೆಗಳನ್ನು ಹಂಚಿಕೊಳ್ಳಲು ಸಾಧ್ಯವಾಗುವಂಥ ಒಂದು ಮುಕ್ತ ವೇದಿಕೆಯನ್ನು ಕಲ್ಪಿಸಿಕೊಟ್ಟೆವು.

- ಸಿದ್ಧಮಾದರಿಗಳ ಬಗೆಗೂ ನಾವು ಚರ್ಚೆ ಮಾಡಿದೆವು ಹಾಗೂ ಹುಡುಗರು ಮತ್ತು ಹುಡುಗಿಯರು ಮಾಡಬೇಕಾದಂತಹ ಕೆಲಸಗಳ ಬಗ್ಗೆ ವಿವರವಾಗಿ ಅಭಿಪ್ರಾಯಗಳನ್ನು ಹಂಚಿಕೊಂಡೆವು. ಈ ಚರ್ಚೆಯಲ್ಲಿ ಬಹುತೇಕ ಎಲ್ಲಾ ಮಕ್ಕಳೂ ಲಿಂಗಾಧಾರಿತವಾಗಿ ಕೆಲಸವನ್ನು ಹಚ್ಚಬಾರದು ಎಂದೇ ಅಭಿಪ್ರಾಯಪಟ್ಟರು.

- ಕಾನೂನಿನ ನೀತಿ ಸಂಹಿತೆಯಾಧಾರಿತ ನಿಯಮಗಳನ್ನು ಚರ್ಚಿಸುವ ಮೂಲಕ ಮಕ್ಕಳಿಗೆ ತಮ್ಮ ಶಾಲೆಗೋಸ್ಕರ ನಿಯಮಗಳನ್ನು ರೂಪಿಸುವ ಸ್ವಾತಂತ್ರ್ಯ ಕೊಡಲಾಯಿತು. ಮಕ್ಕಳು ತಮ್ಮತಮ್ಮಲ್ಲೇ ಅವುಗಳನ್ನು ಚರ್ಚಿಸಿದ ನಂತರ, ನಿಯಮಗಳನ್ನು ರೂಪಿಸಿ, ಎಲ್ಲರ ಹಸ್ತಾಕ್ಷರಗಳನ್ನೊಳಗೊಂಡ ಆ ನಿಯಮಗಳನ್ನು ಶಾಲೆಯ ಗೋಡೆಗಳ ಮೇಲೆ ಅಂಟಿಸಿದರು.

- ಎಲ್ಲ ಧರ್ಮಗಳನ್ನೂ ಗೌರವಿಸಬೇಕೆನ್ನುವ ಅರಿವನ್ನು ಬೆಳೆಸಲು ಬೆಳಗಿನ ಅಸೆಂಬ್ಲಿಯಲ್ಲಿ ಅಂತರ್ಧರ್ಮೀಯ ಪ್ರಾರ್ಥನೆಯನ್ನು ಸೇರಿಸಲಾಯಿತು. ಹಾಗೂ ಪ್ರತಿ ದಿನ ಅಸೆಂಬ್ಲಿಯ ಜವಾಬ್ದಾರಿ ಹೊರಿಸಿ ಮಕ್ಕಳನ್ನು

ಗುಂಪುಗಳನ್ನಾಗಿ ವಿಂಗಡಿಸಲಾಯಿತು. ಪ್ರತಿ ಮಗುವಿಗೂ ಆ ದಿನದ ಒಳ್ಳೆಯ ವಿಚಾರ ಅಥವಾ ಆಯಾ ವಿಷಯ ವಸ್ತುವಿಗೆ ಸಂಬಂಧಪಟ್ಟ ವಿಚಾರವನ್ನು ಪ್ರಸ್ತುತಪಡಿಸಲು ಅವಕಾಶ ನೀಡಲಾಯಿತು.

## ಮಧ್ಯಾಹ್ನದ ಬಿಸಿಯೂಟ - ಸಹಪಂಕ್ತಿ ಭೋಜನ

ಶಿಕ್ಷಕರು ಮಕ್ಕಳೊಟ್ಟಿಗೆ ಕುಳಿತು ಮಧ್ಯಾಹ್ನದ ಊಟ ಮಾಡುತ್ತ ಮಕ್ಕಳ ಬದುಕಿಗೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸುತ್ತಾರೆ. ಇದು ಮಕ್ಕಳು ಶಿಕ್ಷಕರೊಡನೆ ನಿರಾಳವಾಗಿ ವ್ಯವಹರಿಸಲು ಅನುವು ಮಾಡಿಕೊಟ್ಟು ಶಿಕ್ಷಕರೂ ತಮ್ಮಂತೆಯೇ ಎಂಬ ಭಾವನೆಗೆ ಎಡೆ ಮಾಡಿಕೊಡುತ್ತದೆ. ಬಾಣಸಿಗರ ಜೊತೆ ಹೆಣ್ಣುಮಕ್ಕಳು ಮತ್ತು ಗಂಡು ಮಕ್ಕಳು ಕೂಡ ಮಧ್ಯಾಹ್ನದ ಊಟ ಬಡಿಸುವ ಕೆಲಸವನ್ನು ವಹಿಸಿಕೊಳ್ಳುತ್ತಾರೆ. ಕಸ ಗುಡಿಸುವುದು, ತರಗತಿ ಕೋಣೆಯನ್ನು ಅಲಂಕರಿಸುವುದು, ಕುರ್ಚಿ ಮತ್ತು ಮೇಜುಗಳನ್ನು ಎತ್ತಿಡುವುದು, ಸ್ವಚ್ಛತೆ ಕಾಪಾಡುವುದು, ಉದ್ಯಾನದ ಕೆಲಸ ಇಂಥ ಪ್ರತಿ ಕೆಲಸವನ್ನು ಕೂಡ ಎಲ್ಲಾ ಮಕ್ಕಳು ಹಾಗೂ ಶಿಕ್ಷಕರು ಸಮ ಪ್ರಮಾಣದಲ್ಲಿ ವಹಿಸಿಕೊಳ್ಳುವಂತೆ ಖಾತ್ರಿಪಡಿಸಿಕೊಳ್ಳಲಾಗುತ್ತದೆ.

## ತರಗತಿಯ ಆಸನ ಕ್ರಮದಲ್ಲಿ ಬದಲಾವಣೆ

ತರಗತಿಯೊಳಗೆ ಮಕ್ಕಳು ಕುಳಿತುಕೊಳ್ಳುವ ರೂಢಿಗತ ಕ್ರಮದಲ್ಲಿ ಪ್ರತಿ ಮಗುವನ್ನೂ ಪ್ರತ್ಯೇಕವಾಗಿ ತಲುಪಲು ಸಾಧ್ಯವಾಗುತ್ತಿಲ್ಲ ಎಂದು ನಮಗನ್ನಿಸಿತು. ಇದರಿಂದಾಗಿ ಕೆಲ ಮಕ್ಕಳು ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವುದು ಕಷ್ಟಕರವಾಗಿತ್ತು. ನಾವು ಹೊಸ ರೀತಿಯಲ್ಲಿ ಕುಳಿತುಕೊಳ್ಳುವ ಕ್ರಮವನ್ನು ಜಾರಿಗೆ ತರಲು ಯೋಚಿಸಿದೆವು ಹಾಗೂ ಒಂದು ವೇಳೆ ಹೊಸ ಕ್ರಮ ಪರಿಣಾಮ–ಕಾರಿಯಾಗಿಲ್ಲದಿದ್ದರೆ ಹಳೇ ಕ್ರಮಕ್ಕೇ ವಾಪಸಾಗುವುದೆಂದು–ಕೊಂಡೆವು. ಕುಳಿತುಕೊಳ್ಳುವ ಹೊಸ ಕ್ರಮವು ಅರ್ಧವೃತ್ತಾಕಾರವಾಗಿದ್ದು, ಮಕ್ಕಳಿಗೆ ಇದು ಬಹಳ ಇಷ್ಟವಾಯಿತು. ಪ್ರತಿ ಮಗುವನ್ನೂ ತಲುಪುವುದು ಇದರಿಂದ ಸುಲಭವಾಯಿತಲ್ಲದೇ ಗುಂಪು ಚಟುವಟಿಕೆಗಳಿಗೆ ತರಗತಿ ಕೋಣೆಯ ಮಧ್ಯದಲ್ಲಿ ಸಾಕಷ್ಟು ಜಾಗವೂ ಉಳಿಯುತ್ತಿ–ದ್ದುದರಿಂದ ಈ ಹೊಸ ಕ್ರಮ ಪರಿಣಾಮ–ಕಾರಿಯಾಯಿತು ಎಂದೇ ಹೇಳಬಹುದು. ನಾವೀಗ ತರಗತಿಯಲ್ಲಿ ಪರಸ್ಪರ ಊಟವನ್ನು ಹಂಚಿಕೊಳ್ಳುತ್ತೇವೆ ಮತ್ತು ಬೇರೆಬೇರೆ ಚಟುವಟಿಕೆಗಳಲ್ಲಿ ಭಾಗವಹಿಸುತ್ತೇವೆ.

## ಮಕ್ಕಳ ಮೂಲೆ

ಇಡೀ ಶಾಲೆ ಮಕ್ಕಳಿಗಾಗಿಯೇ ಇದ್ದರೂ ಅವರ ಎಲ್ಲಾ ಕೆಲಸಗಳು ಮತ್ತು ಸೃಜನಶೀಲ ಕಾರ್ಯಗಳು ಅವರ ಪಾಟಿ ಚೀಲದೊಳಗಿರುವ ಪುಸ್ತಕಗಳಲ್ಲೇ ಅಡಗಿರುತ್ತವೆ. ಪ್ರತಿಯೊಂದು ಮಗುವಿನಲ್ಲೂ ಒಂದು ವಿಶೇಷ ಪ್ರತಿಭೆಯಿದ್ದು ಅದನ್ನು ಪ್ರದರ್ಶಿಸುವ ಅಗತ್ಯ ಇದೆ. ಆದ್ದರಿಂದ ಪ್ರತೀ ತರಗತಿಯಲ್ಲಿಯೂ ನಾವು ಮಕ್ಕಳ ಮೂಲೆಯೊಂದನ್ನು (Children's Corner) ಸೃಷ್ಟಿಸಿದೆವು. ಈ ಚಟುವಟಿಕೆಗೋಸ್ಕರ ನಾವು ತರಗತಿಯ ಮುಂಭಾಗದ ಕಪ್ಪು ಹಲಗೆಯ ಕೆಳಗಿನ ಗೋಡೆಯ ಭಾಗವನ್ನು ಆಯ್ದುಕೊಂಡೆವು. ಈ ಜಾಗದಲ್ಲಿ ಪ್ರತಿಯೊಂದು ಮಗುವೂ ತನ್ನ ಕಾರ್ಯಯೋಜನೆಯನ್ನು ಅಥವಾ ತನ್ನ ಯಾವುದೇ ರಚನೆಯನ್ನಾದರೂ ಪ್ರದರ್ಶನಕ್ಕಿಡಬಹುದಾಗಿತ್ತು. ತಮ್ಮ ಕೃತಿಯನ್ನು ಇಡೀ ತರಗತಿಯೆದುರು ಹೀಗೆ ಪ್ರದರ್ಶನಕ್ಕಿಟ್ಟಾಗ ಅವರಿಗೆ ತಮ್ಮಲ್ಲೇನೋ ವಿಶೇಷತೆ ಇದೆ ಎಂಬ ಭಾವನೆ ಬರುತ್ತದೆ. ಅದಲ್ಲದೆ ಇನ್ನೂ ವಿನೂತನವಾದ ಕಲ್ಪನಾಶಕ್ತಿಯುಳ್ಳ ಕೃತಿಗಳನ್ನು ರಚಿಸಲು ಅವರಿಗೆ ಉತ್ತೇಜನ ನೀಡುತ್ತದೆ. ತಮ್ಮ ಈ "ವಿಶೇಷ" ಮೂಲೆಯ ('special' corner) ಕುರಿತು ಮಕ್ಕಳಿಗೆ ಬಹಳ ಸಂತೋಷ ಉಂಟಾಗುತ್ತದೆ.

## ಶಾಲೆಯನ್ನು ಅಲಂಕರಿಸುವುದರಲ್ಲಿ ಭಾಗವಹಿಸುವುದು

ಶಾಲೆಗೆ ಬಣ್ಣ ಹೊಡೆಯುವ ಈ ಚಟುವಟಿಕೆಯನ್ನು ಮಾಡುವಾಗ ನಮ್ಮ ಸಮಯ ಅದ್ಭುತವಾಗಿ ಕಳೆಯಿತಲ್ಲದೆ ಹಲವಾರು ಪ್ರಶ್ನೆಗಳಿಗೆ ನಮಗೆ ಉತ್ತರ ಸಿಕ್ಕಿತು. ಮಕ್ಕಳ ಜೊತೆಗೆ ಹಳ್ಳಿಯವರು ಕೂಡ ನಮ್ಮ ಪ್ರಯತ್ನಗಳನ್ನು ಶ್ಲಾಘಿಸಿ ತಮ್ಮ ಸಹಾಯಹಸ್ತವನ್ನು ಚಾಚುವುದರ ಮೂಲಕ ಈ ಚಟುವಟಿಕೆಯಲ್ಲಿ ಭಾಗವಹಿಸಿದರು. ಬಣ್ಣ ಬಳಿಯುತ್ತಿದ್ದ 5ನೇ ತರಗತಿಯ ವಿದ್ಯಾರ್ಥಿಯೊಬ್ಬ "ಮೇಡಂ, ನಾವು ಶಾಲೆಯನ್ನು ಇಷ್ಟೆಲ್ಲಾ ಕಷ್ಟಪಟ್ಟು ಸುಂದರಗೊಳಿಸುತ್ತಿದ್ದೇವೆ, ನಾವು ಶಾಲೆ ಬಿಟ್ಟ ಮೇಲೆ ಇದನ್ನೆಲ್ಲಾ ಯಾರು ಮಾಡುತ್ತಾರೆ ?" ಎಂದು ಕೇಳಿದ. ಅವನು ಹಾಗೆ ಕೇಳುವಾಗ ಅವನ ಕಣ್ಣುಗಳು ಈ ಶಾಲೆಯ ಬಗೆಗೆ ಅವನಿಗಿದ್ದ ಪ್ರೀತಿ ಹಾಗೂ ಜವಾಬ್ದಾರಿಗಳನ್ನು ಹೊರಸೂಸುತ್ತಿದ್ದವು.

## ಪೋಷಕರ ಸಭೆಯನ್ನು ಏರ್ಪಡಿಸಿದ್ದು

ವಿದ್ಯಾರ್ಥಿಗಳ ಪೋಷಕರಿಗೂ ಹಾಗೂ ಶಿಕ್ಷಕರಿಗೂ ಯಾವುದೇ ರೀತಿಯ ಸಂಪರ್ಕ ಇಲ್ಲದೇ ಇರುವುದು ನಮಗೆ ಕಂಡು ಬಂತು. ಇದರ ಫಲವಾಗಿ ನಮಗೆ ಮಕ್ಕಳ ಮನೆಯಲ್ಲಿನ ದೈನಂದಿನ ಜೀವನ, ಅಭ್ಯಾಸಗಳು, ಸಮಸ್ಯೆಗಳು ಅಥವಾ ಸನ್ನಿವೇಶಗಳ ಬಗ್ಗೆ ಯಾವುದೇ ಅರಿವಿಲ್ಲದಿರುವುದೂ ಗಮನಕ್ಕೆ ಬಂತು. ಇದೇ ರೀತಿ ಪೋಷಕರಿಗೂ ಶಾಲೆಯಲ್ಲಿ ಮಕ್ಕಳ ಪ್ರಗತಿ ಹಾಗೂ ಚಟುವಟಿಕೆಗಳ ಬಗ್ಗೆ ಅರಿವಿರಲಿಲ್ಲ. ಇದನ್ನು ಪರಿಗಣಿಸಿ, ಮೂರರಿಂದ ಐದನೇ ತರಗತಿಯವರೆಗಿನ ಮಕ್ಕಳ ಪೋಷಕರಿಗೋಸ್ಕರ ಒಂದು ಶಿಕ್ಷಕ – ಪೋಷಕರ ಸಭೆಯನ್ನು ಏರ್ಪಡಿಸಲು ನಿರ್ಧರಿಸಿದೆವು. ಪೋಷಕರೆಲ್ಲ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು; ಅವರು ತಮ್ಮ ಕಾಳಜಿಗಳನ್ನು ವ್ಯಕ್ತಪಡಿಸಿದ್ದಲ್ಲದೆ ಸಹಾಯಕ ಸಲಹೆಗಳನ್ನು ಕೂಡ ನೀಡಿದರು. ನಾವು ಅವರಿಗೆ ಮೌಲ್ಯಮಾಪನ ಮಾಡಿದ ಅರ್ಧವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಕೂಡ ತೋರಿಸಿದೆವು. ಮಕ್ಕಳ ಪ್ರಗತಿಗೋಸ್ಕರ ತಮ್ಮ ಸಹಕಾರವನ್ನು ವಿಸ್ತರಿಸಲು ಕೋರಿಕೊಂಡೆವು. ಅಲ್ಲಿ ನವೋದಯ ವಿದ್ಯಾಲಯದ ಬಗ್ಗೆ

ಒಂದು ಚರ್ಚೆ ಕೂಡ ನಡೆಯಿತು. ಆಗ ಆ ಶಾಲೆಯ ಅನುಕೂಲಗಳ ಬಗ್ಗೆ ವಿವರಿಸಲಾಯಿತು. ಪೋಷಕರು ಮೊದಲೆಂದೂ ಇಂಥದೊಂದು ಸಭೆಯಲ್ಲಿ ಪಾಲ್ಗೊಂಡಿರಲಿಲ್ಲ. ಎಲ್ಲ ಪೋಷಕರು ಬಂದಿರಲಿಲ್ಲ, ಬಹುಶಃ ಹಿಂದೆಂದೂ ಅವರು ತಮ್ಮ ಮಕ್ಕಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಹೀಗೆ ಚರ್ಚಿಸಿರದ ಕಾರಣವೂ ಇರಬಹುದು. ಆದಾಗ್ಯೂ ಹಾಜರಿದ್ದ ಎಲ್ಲ ಪೋಷಕರು ಕೂಡ ಚರ್ಚೆಯಲ್ಲಿ ಭಾಗವಹಿಸಿದರು. ಕೆಲವು ಮಕ್ಕಳ ಅಜ್ಜಅಜ್ಜಿಯರು ಬಂದಿದ್ದರು; ಅವರ್ಯಾರೂ ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡಿದವರಾಗಿರಲಿಲ್ಲ. ಆದರೂ ತಮ್ಮ ಮೊಮ್ಮಕ್ಕಳ ಮೇಲಿನ ಕಾಳಜಿಯಿಂದಾಗಿ ನಮಗೆಲ್ಲ ಚೆನ್ನಾಗಿ ಪಾಠ ಮಾಡಲು ಸೂಚನೆಯಿತ್ತಿದ್ದು ಬಹಳ ಧನಾತ್ಮಕ ಅನುಭವವಾಗಿತ್ತು.

## ಪೋಷಕರನ್ನು ಮನೆಯಲ್ಲೇ ಭೇಟಿ ಮಾಡಿದ್ದು

ಕೆಲವು ಮಕ್ಕಳು ಸತತವಾಗಿ ಗೈರುಹಾಜರಾಗುತ್ತಿದ್ದು ಅವರ ಪೋಷಕರು ಕೂಡ ಶಿಕ್ಷಕ–ಪೋಷಕ ಸಭೆಗೆ ಬಂದಿರಲಿಲ್ಲವಾದ್ದರಿಂದ ಅವರನ್ನು ಹೇಗಾದರೂ ಭೇಟಿ ಮಾಡುವುದು ನಮಗೆ ಬಹಳ ಮುಖ್ಯವಾಗಿತ್ತು. ನಾವು ಅವರನ್ನು ಅವರ ಮನೆಗೇ ಹೋಗಿ ಭೇಟಿ ಮಾಡಲು ನಿರ್ಧರಿಸಿದೆವು. ಇದಕ್ಕೆ ಬೇರೆ ಕಾರಣಗಳೂ ಇದ್ದವು. ಉದಾಹರಣೆಗೆ, ಐದನೇ ತರಗತಿಯಲ್ಲಿ ಓದುತ್ತಿದ್ದ, ತರಗತಿಯ ಹಾಗೂ ಶಾಲೆಯ ಎಲ್ಲಾ ಚಟುವಟಿಕೆಯಲ್ಲೂ ಮುಂದಿದ್ದ ಬಹಳ ಬುದ್ಧಿವಂತ ಮಗುವೊಂದು ಇದ್ದಕ್ಕಿದ್ದಂತೆ ಬದಲಾಗಿಬಿಟ್ಟಿದ್ದ. ಅವನು ಮಂಕಾಗಿರುತ್ತಿದ್ದ ಮತ್ತು ಬಹು ಬೇಗ ಕಿರಿಕಿರಿಗೊಳಗಾಗುತ್ತಿದ್ದ. ತರಗತಿಯ ಚಟುವಟಿಕೆಯಲ್ಲೂ ಆಸಕ್ತಿಯಿಂದ ಭಾಗವಹಿಸುತ್ತಿರಲಿಲ್ಲ. ನಾವು ಅವನ ಗೆಳೆಯರನ್ನು ವಿಚಾರಿಸಿದೆವು, ಅವರಿಗೇನೂ ತಿಳಿದಿರಲಿಲ್ಲ. ಅವನನ್ನು ಮಾತನಾಡಿಸಲು ಪ್ರಯತ್ನಿಸಿದ್ದು ಕೂಡ ವ್ಯರ್ಥವಾಯಿತು. ನವೋದಯ ವಿದ್ಯಾಲಯದ ಅರ್ಜಿ ತುಂಬಲೂ ನಿರಾಕರಿಸಿದ ಅವನು, ಶಾಲೆಗೆ ಬರಲೂ ಆಸಕ್ತಿ ಕಳೆದುಕೊಂಡುಬಿಟ್ಟಿದ್ದ. ನಾವು ಅವನ ಮನೆಗೆ ಹೋಗಿ ಅವನ ತಾಯಿಯೊಡನೆ ಮಾತಾಡಿದಾಗ ತಿಳಿದುಬಂದಿದ್ದೇನೆಂದರೆ, ಮನೆಯಲ್ಲಿ ಬಹಳ ಜಗಳ ಗಲಾಟೆಗಳಾಗುತ್ತಿದ್ದು ಅದು ಆ ಮಗುವಿನ ಮೇಲೆ ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ದುಷ್ಪರಿಣಾಮ ಬೀರಿತ್ತು. ಅವನ ತಾಯಿಯೊಡನೆ ಮಾತನಾಡಿ ಈ ವಿಷಯವನ್ನು ಅವರಿಗೆ ತಿಳಿಸಿದೆವು. ಇದು ಕೊಂಚ ಮಟ್ಟಿಗೆ ಪರಿಸ್ಥಿತಿಯನ್ನು ಸುಧಾರಿಸಿತು ಹಾಗೂ ಈಗ ಅವನು ತನ್ನ ಹಿಂದಿನ ಸ್ವರೂಪಕ್ಕೆ ನಿಧಾನವಾಗಿ ಮರಳುತ್ತಿದ್ದಾನೆ.

## ಎಲ್ಲ ಧರ್ಮಗಳ ಹಬ್ಬಗಳನ್ನೂ ಆಚರಿಸುವುದು

ಇದಕ್ಕೆ ಮುಖ್ಯ ಕಾರಣವೆಂದರೆ ಮಕ್ಕಳಿಗೆ ಇತರ ಧರ್ಮಗಳ ಬಗ್ಗೆ ಯಾವುದೇ ತಿಳಿವಳಿಕೆಯಿರಲಿಲ್ಲ. ಬೇರೆ ಧರ್ಮಗಳ ಬಗ್ಗೆ ಕೊಂಚವಾದರೂ ತಿಳಿದುಕೊಂಡಿದ್ದ ಒಂದಿಬ್ಬರಿಗೂ ಇತರ ಧರ್ಮಗಳ ಬಗ್ಗೆ ಅಂತಹ ಗೌರವವಿರಲಿಲ್ಲ, ಹಾಗಾಗಿ ಈ ಚಟುವಟಿಕೆಯನ್ನು ಮಾಡುವುದು ಅನಿವಾರ್ಯವಾಗಿತ್ತು.

ನಾವು ಕ್ರಿಸ್ಮಸ್ ಹಬ್ಬವನ್ನು ಆಚರಿಸುವುದರ ಮೂಲಕ ಶುರು ಮಾಡಿದೆವು. ನಾವು ಮೊದಲಿಗೆ ಈ ಹಬ್ಬದ ಬಗ್ಗೆ ಮಕ್ಕಳಿಗೇನು ಗೊತ್ತಿದೆ ಎಂದು ಕೇಳಿದೆವು ಮತ್ತು ಆನಂತರ ಕ್ರಿಸ್ಮಸ್ ಹಬ್ಬವನ್ನು ಹೇಗೆ ಆಚರಿಸುವುದೆಂದು ಚರ್ಚಿಸಿದೆವು. ಈ ಚಟುವಟಿಕೆಯ ಸಂದರ್ಭದಲ್ಲಿ ಕೆಲವು ಮಕ್ಕಳಿಗೆ ಭಾಗವಹಿಸಲು ಹಿಂಜರಿಕೆ ಇದ್ದುದು ಕಂಡುಬಂತು. ಕಾರಣ ಅವರು ಈ ಬಗ್ಗೆ ಕೇಳಿದ್ದ ಸಂಗತಿಗಳಿಂದ ತಮ್ಮ ಧರ್ಮವೊಂದನ್ನು ಬಿಟ್ಟು ಬೇರೆ ಧರ್ಮಗಳ ಬಗ್ಗೆ ತಪ್ಪು ಕಲ್ಪನೆಯನ್ನು ಹೊಂದಿದ್ದರು. ಬಹಳ ದೀರ್ಘವಾದ ಸಮಾಲೋಚನೆಯ ಬಳಿಕ ಅವರ ಕೆಲವು ತಪ್ಪುಕಲ್ಪನೆಗಳನ್ನು ದೂರಗೊಳಿಸಲು ಸಾಧ್ಯವಾಯಿತು. ಅದಾದ ಮೇಲೆ ಎಲ್ಲ ಮಕ್ಕಳು ಕ್ರಿಸ್ಮಸ್ ಟೋಪಿಗಳನ್ನು ಮಾಡಿ ಚೆನ್ನಾಗಿ ಕಾಲ ಕಳೆದರು.

ಇವು ನಮ್ಮ ಶಾಲೆಯ ತಂಡ (ಶಿಕ್ಷಕರು ಮತ್ತು ಮಕ್ಕಳು), ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಸದಸ್ಯರ ಜೊತೆಗೂಡಿ ಶಾಲೆಯನ್ನು ಸಮನ್ವಯಗೊಳಿಸಲು ಮಾಡುತ್ತಿರುವ ಚಿಕ್ಕ ಚಿಕ್ಕ ಪ್ರಯತ್ನಗಳು.



**ಸಂಧ್ಯಾದೇವಿ ಸೂರ್ಯವಂಶಿ** ಅವರು ಗಿದ್ಧಾದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಕಲಿಸುತ್ತಿದ್ದಾರೆ (ಜಂಜಗಿರ್ ಜಿಲ್ಲೆ, ಛತ್ತೀಸ್‌ಘಡ). 2013ರಿಂದ ಶಿಕ್ಷಕರಾಗಿರುವ ಸಂಧ್ಯಾದೇವಿ ಅವರು ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು ಪ್ರಾಥಮಿಕ ಶಾಲೆಯ ಮಕ್ಕಳಿಗೆ ಕಲಿಸುವ ಆಸಕ್ತಿ ಹೊಂದಿದ್ದಾರೆ. ಇವರಿಗೆ ಹಾಡುವುದು ಇಷ್ಟ. ಅವರನ್ನು sandhyadevi1986@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಸ್ವಯಂಪ್ರಭಾ ಹೆಗ್ಡೆ** | ಪರಿಶೀಲನೆ: **ನಾಗಮಣಿ ಎಸ್.ಎನ್.**

ಮಕ್ಕಳಿಗೆ ತಾವೂ ಮುಖ್ಯ ಎಂದು ಅರಿವಾಗುವಂತೆ ಮಾಡಬೇಕು. ಜನ ಅವರೊಂದಿಗೆ ಮಾತನಾಡುತ್ತಿದ್ದಾಗ ಅವರ ಮಾತುಗಳನ್ನೂ ಆಲಿಸಬೇಕು ಮತ್ತು ಅವರಲ್ಲಿ ಭರವಸೆಯನ್ನು ತುಂಬಬೇಕು. ಯಾರೋ ನಮ್ಮ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ ಎಂಬ ಸುರಕ್ಷತೆಯ ಭಾವನೆ ಅವರಲ್ಲಿ ಮೂಡಬೇಕು. ಇದರಿಂದ ಅವರನ್ನು ತರಗತಿಯಲ್ಲಿ, ಕಾರಿಡಾರ್‌ನಲ್ಲಿ ಅಥವಾ ಇನ್ನಿತರ ಯಾವುದೇ ಸ್ಥಳದಲ್ಲಿ ಮುಕ್ತವಾಗಿ ಭೇಟಿ ಮಾಡಲು ಸಾಧ್ಯವಾಗುತ್ತದೆ. ನಿಮ್ಮ ಊಟ ಮುಗಿಯಿತೇ ಅಥವಾ ನಿಮಗೆ ಶೀತವಾಗಿದೆಯೇ ಎಂಬ ಸಣ್ಣಪುಟ್ಟ ವಿಚಾರಣೆ ಮಾಡುವುದೇ ಮಕ್ಕಳ ಪಾಲಿಗೆ ದೊಡ್ಡ ಸಾಂತ್ವನವಾಗಿರುತ್ತದೆ. ಇಲ್ಲದೇ ಹೋದರೆ ಅವರಿಗೆ ತಮ್ಮ ಕುಟುಂಬದಿಂದ ಇಂತಹ ಕಾಳಜಿಯ ಮಾತುಗಳು ಸಿಗುವುದಿಲ್ಲ. ಅವರ ಕುಟುಂಬ ಸಾಮಾನ್ಯವಾಗಿ ದಿನನಿತ್ಯದ ಅಗತ್ಯಗಳನ್ನು ಪೂರೈಸುವುದರಲ್ಲಿಯೇ ಮುಳುಗಿರುತ್ತದೆ.